ಓ ಎಸ್ಃ 577/14

ಡಿ ಡಬ್ಲ್ಯೂ ಃ 5

ದಿನಾಂಕಃ 28.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ

ನಾನು 1975ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ವಿಭಾಗ ಮಾಡಿಕೊಂಡಿರುವ ವಿಭಾಗ ಪತ್ರ, ಪಹಣಿ ಮತ್ತು ನನ್ನ ತಂದೆ ನನ್ನ ಚಿಕ್ಕಪ್ಪನಿಂದ ಖರೀದಿ ಮಾಡಿರುವ ಪತ್ರವನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಸದರಿ ಪತ್ರಗಳನ್ನು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಗುರುತಿಸಿರುವ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳ ಬಗ್ಗೆ ಹೇಳಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ ನನ್ನ ಪ್ರಮಾಣ ಪತ್ರದಲ್ಲೂ ನಾನು ಅದರ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ನಾನು 1986ರಲ್ಲಿ ಹುಟ್ಟಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಸುಮಾರು 20 ವರ್ಷಗಳಿಗೆ ಬಂದಿರುತ್ತದೆ, ಅಂದರೆ 2006ರಲ್ಲಿ ಬಂದಿರುತ್ತದೆ. 2006ಕ್ಕಿಂತ ಹಿಂದೆ ಆಗಿರುವ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುತ್ತದೆಯೇ ಎಂದರೆ ಇತ್ತು ಎಂದು ನುಡಿಯುತ್ತಾರೆ. ನಾನು ದಿನಾಂಕಃ 09-05-1975ರ ದಾಖಲಾತಿಯನ್ನು ಖುದ್ದಾಗಿ ನೋಡಿ ಅದನ್ನು ಓದಿರುತ್ತೇನೆ. ಆ ಪತ್ರದಲ್ಲಿ ಇರುವ ವಕ್ಕಣೆಗಳನ್ನು ನಾನು ಅಲ್ಪಸ್ವಲ್ಪ ತಿಳಿದುಕೊಂಡಿರುತ್ತೇನೆ. ಸದರಿ ಪತ್ರಕ್ಕೆ ನನ್ನ ತಂದೆ ಮತ್ತು ಚಿಕ್ಕಪ್ಪ ಪಕ್ಷಗಾರರಾಗಿರುತ್ತಾರೆ. ಅದರಲ್ಲಿ ಯಾರು ಯಾರು ಪಕ್ಷಗಾರರು ಆಗಿರುತ್ತಾರೆ, ಯಾವ ಯಾವ ಸ್ವತ್ತುಗಳು ಯಾರಿಗೆ ಹೋಗಿರುತ್ತದೆ, ಅದರ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿ ಅದರ ಸರ್ವೆ ನಂಬರುಗಳನ್ನು ನನಗೆ ಹೇಳಲು ಆಗುತ್ತದೆ ಎಂದು ನುಡಿಯುತ್ತಾರೆ. ದಿನಾಂಕಃ 08-03-1985ರ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೆ ಮತ್ತು ನನ್ನ ಅಣ್ಣ ಕೂಡ ಅದನ್ನು ಹಾಜರುಪಡಿಸಿರುತ್ತಾರೆ. ಸಾಕ್ಷಿಗೆ ದಿನಾಂಕಃ 08-03-1985ರ ದಾಖಲಾತಿಯನ್ನು ನಿಡಿ6 ಆಗಿರುತ್ತದೆಯೇ ಎಂದು ನಿಡಿ6ನ್ನು ತೋರಿಸಿದರೆ ಸಾಕ್ಷಿ ಅದನ್ನು ನೋಡಿ ಪರಿಶೀಲನೆ ಮಾಡಿ ಸಾಕ್ಷಿ ಸರಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿ ನೊಂದಣಿಯಾಗಿರುವುದಿಲ್ಲ ಎಂದರೆ ಸಾಕ್ಷಿ ನೋಂದಣಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಡಿ6 ನೊಂಣಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ6 ನೊಂದಣಿಯಾಗಿದ್ದರೆ ಅದರ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುತ್ತದೆಯೇ ಎಂದರೆ ಆಗುತ್ತದೆ ಎಂದು ನುಡಿಯುತ್ತಾರೆ. ನಿಡಿ6ನ್ನು ನನ್ನ ತಂದೆ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸುಳ್ಳು. ವಿಭಾಗ ಆಗಿರುತ್ತದೆ ಎಂದು ಹೇಳುವ ಪತ್ರಕ್ಕೆ ಯಾರು ಸಾಕ್ಷಿದಾರರು ಮತ್ತು ಅದರ ಬರವಣಿಗೆದಾರರು ಯಾರು ಎಂದು ಕೇಳಿದರೆ ಸಾಕ್ಷಿ ಶಿವರಾಮಯ್ಯ

ಎನ್ನುವವರು ಸಾಕ್ಷಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ1 ವಿಭಾಗ ಪತ್ರದಲ್ಲಿ ನನ್ನ ಭಾಗಕ್ಕೆ ಸರ್ವೆ ನಂ.69/1 ಎಂದು ಹೇಳಿ ನಂತರ ನನಗೆ ಭಾಗ ಕೊಡುತ್ತಾರೆ ಎಂದು ನನ್ನ ಅಣ್ಣಂದಿರು ಎಂದು ನುಡಿಯುತ್ತಾರೆ.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ